## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1052 |
| 2 ಸದಸ್ಯರ ಹೆಸರು | : | ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು) |
| 3 ಉತ್ತರಿಸುವ ದಿನಾಂಕ | : | 22-09--2022 |
| 4 ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಬೆಂಗಳೂರು ನಗರದಲ್ಲಿ ಅತಿವೃಷ್ಠಿ ಉಂಟಾಗಿದ್ದು, ಸದರಿ ಅತಿವೃಷ್ಠಿಯಿಂದ ಉಂಟಾದ ಒಟ್ಟು ನಷ್ಟ ಎಷ್ಟು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 08 ವಲಯಗಳ ಕೆಲವು ಪ್ರದೇಶಗಳಲ್ಲಿ ಅತಿವೃಷ್ಠಿಯಿಂದ ಹಾಳಾದ ರಸ್ತೆ ಮತ್ತು ಚರಂಡಿಯ ಒಟ್ಟು ಉದ್ದ 285.44 ಕಿ.ಮೀ. ಗಳು ಮತ್ತು ಮಳೆಯ ನೀರಿನಿಂದ ಹಾನಿಗೊಳಗಾದ ಮನೆಗಳ ಸಂಖ್ಯೆ: 2481 ಆಗಿರುತ್ತದೆ. ಮಳೆಯ ನೀರಿನಿಂದ ಹಾನಿಗೊಳಗಾದ ಒಟ್ಟು ನಷ್ಟದ ಮೊತ್ತ ರೂ.394.089 ಕೋಟಿಗಳು ಎಂದು ಅಂದಾಜಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ಪ್ರತಿ ಮಳೆಗಾಲದಲ್ಲಿಯೂ ಸಹ ಇದೇ ಅತಿವೃಷ್ಠಿ ಉಂಟಾಗುತ್ತಿದ್ದು, ಸದರಿ ತಗ್ಗು ಪ್ರದೇಶಗಳ ಅಭಿವೃದ್ಧಿಗೆ ಹಾಗೂ ಅತಿವೃಷ್ಟಿ ಉಂಟಾಗದ ರೀತಿಯಲ್ಲಿ ಸರ್ಕಾರವು ಪ್ರಸ್ತುತ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಮುಂದಿನ ದಿನಗಳಲ್ಲಿ ಅತಿವೃಷ್ಠಿ ಉಂಟಾಗದಂತೆ ಯಾವ ಯಾವ ಸುಧಾರಣೆಯ ಕ್ರಮಗಳನ್ನು ಕೈಗೊಳ್ಳಲಾಗುವುದು; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 305 ರಲ್ಲಿ "ಬೆಂಗಳೂರು ನಗರದ ಮಳೆ ನೀರು ಹರಿವಿಕೆಗೆ ಬೃಹತ್ ಮಳೆನೀರುಗಾಲುವೆಗಳನ್ನು ಮತ್ತು ಮಳೆ ಸುರಿದಾಗ ಪ್ರವಾಹ ಉಂಟಾಗದಂತೆ ತಡೆಯಲು ರಾಜಕಾಲುವೆ ಅಭಿವೃದ್ಧಿಗಾಗಿ 1500.00 ಕೋಟಿ ರೂ.ಗಳ ಮೊತ್ತದಲ್ಲಿ ಯೋಜನೆ ರೂಪಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.<br><br>ಅದರಂತೆ, ಸರ್ಕರದ ಆದೇಶ ಸಂಖ್ಯೆ: ನಅಇ 259 ಎಂಎನ್‌ವೈ 2022(ಇ), ದಿನಾಂಕ:07-06-2022ರಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಬೃಹತ್ ಮಳೆನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ರೂ.481.88 ಕೋಟಿಗಳು ಹಾಗೂ ದ್ವಿತೀಯ ಬೃಹತ್ ಮಳೆನೀರು ಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ರೂ.1005.12 ಕೊಟಿಗಳು ಹೀಗೆ ಒಟ್ಟು ರೂ.1500-00 ಕೋಟಿಗಳ ಅಂದಾಜು ಮೊತ್ತದ ಒಟ್ಟು 359 ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡಿ ಆದೇಶಿಸಲಾಗಿದೆ. |

. . .2/-

| | | |
|---|---|---|
| | | ಬೃಹತ್ ಮಳೆ ನೀರುಗಾಲುವೆಗಳ ಅಭಿವೃದ್ಧಿಗಾಗಿ ಅನುಮೋದಿಸಿರುವ ಅನುದಾನದಲ್ಲಿ 171.49 ಕಿ.ಮೀ ಉದ್ದದ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಟೆಂಡರ್ ಅನುಮೋದನೆ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br><br>"ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ" ಯೋಜನೆಯಡಿ ರೂ.114.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಸದರಿ ಅನುದಾನದಲ್ಲಿ 8.35 ಕಿ.ಮೀ ಉದ್ದದ ದ್ವಿತೀಯ ಹಂತದ ರಾಜಕಾಲುವೆಗಳನ್ನು ಹಾಗೂ ರೈಲ್ವೇ ಕೆಳಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ತಗ್ಗು ಪ್ರದೇಶದಲ್ಲಿ ನೀರು ನಿಲ್ಲದಂತೆ ಸುಧಾರಣಾ ಕ್ರಮಗಳನ್ನು ಬಿಬಿಎಂಪಿ ವತಿಯಿಂದ ಕೈಗೊಳ್ಳಲಾಗಿರುತ್ತದೆ. |
| ಇ) | ಬೆಂಗಳೂರಿನ ತಗ್ಗು ಪ್ರದೇಶಗಳಿಗೆ ಮಳೆ ಹಾನಿ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಸರ್ಕಾರವು ತಂತ್ರಜ್ಞಾನ ವರದಿಯನ್ನು ಸಿದ್ದಪಡಿಸಿ, ಉಂಟಾಗುವ ಹಾನಿಯ ಬಗ್ಗೆ ಮುನ್ನೆಚ್ಚರಿಕೆ ಕ್ರಮವನ್ನು ವಹಿಸುವ ಕುರಿತು ಸಾರ್ವಜನಿಕರಿಗೆ ತಿಳಿಸಿ ಮುಂದಿನ ದಿನಗಳಲ್ಲಿ ಯಾವುದೇ ತೊಂದರೆ ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳು ನಷ್ಟವಾಗದಂತೆ ಸೂಕ್ತ ಪರಿಹಾರವನ್ನು ಒದಗಿಸಿ ಸರ್ಕಾರವು ಶಾಶ್ವತ ಪರಿಹಾರವನ್ನು ಒದಗಿಸಲು ತೆಗೆದುಕೊಂಡಿರುವ ಕ್ರಮಗಳೇನು; (ಮಾಹಿತಿಯನ್ನು ಒದಗಿಸುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 859 ಕಿ.ಮೀ. ಉದ್ದದ ರಾಜಕಾಲುವೆಯನ್ನು ಗುರುತಿಸಲಾಗಿದ್ದು, ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆಯ ಸಹಾಯದಿಂದ ಒಟ್ಟು 191 ತಗ್ಗು ಪ್ರದೇಶಗಳನ್ನು ತಂತ್ರಜ್ಞಾನದ ಆಧಾರದಲ್ಲಿ ಗುರುತಿಸಲಾಗಿದ್ದು, ಸದರಿ ಸಂಸ್ಥೆಯ ವತಿಯಿಂದ ರಾಜಕಾಲುವೆಗಳಲ್ಲಿ ನೀರಿನ ಹರಿವನ್ನು ಮಾಪನ ಮಾಡಲು 27 ಸೂಕ್ಷ್ಮ ಪ್ರದೇಶಗಳಲ್ಲಿ ಸೆನ್ಸಾರ್‌ಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಸೆನ್ಸಾರ್‌ಗಳು ನೀರಿನ ಮಟ್ಟವನ್ನು ಕನಿಷ್ಠ, ಸಾಧಾರಣ, ಗರಿಷ್ಠ ಮತ್ತು ಅಪಾಯ ಮಟ್ಟದ ಸಂದೇಶವನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆ (KSNDMC) ಯ ನಿಯಂತ್ರಣ ಕೇಂದ್ರಕ್ಕೆ ರವಾನಿಸಿ, ಅಲ್ಲಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾಹಿತಿ ದೊರೆಯುವಂತೆ ಮಾಡಲಾಗಿರುತ್ತದೆ. ಪ್ರಸ್ತುತ ಇರುವ ಸೆನ್ಸಾರ್‌ಗಳ ತಂತ್ರಜ್ಞಾನವನ್ನು ಹೆಚ್ಚಿಸಲು ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆಯಿಂದ ಕ್ರಮ ಕೈಗೊಳ್ಳಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸಂಸ್ಥೆಯು "ಮೇಘ ಸಂದೇಶ" ಎಂಬ ಮೊಬೈಲ್ ಆಪ್‌ನ್ನು ಸಿದ್ಧಪಡಿಸಿದ್ದು, ಸಾರ್ವಜನಿಕರಿಗೆ ಮುಂದಿನ ಗಂಟೆಗಳಲ್ಲಿ ಆಗುವ ಮಳೆ, ನೀರು ನಿಲ್ಲುವಿಕೆ (Inundation) ಆಗುವ ಪ್ರದೇಶಗಳನ್ನು ಗುರುತಿಸಲು ಹಾಗೂ ಸಾರ್ವಜನಿಕರು ಕೈಗೊಳ್ಳಬೇಕಾದ ಬದಲಿ ರಸ್ತೆಯನ್ನು ಸಹ ತಂತ್ರಜ್ಞಾನದ ಆಧಾರದಲ್ಲಿ ವರದಿಯನ್ನು ಸಿದ್ಧಪಡಿಸಿ, ಉಂಟಾಗುವ ಹಾನಿಯ ಬಗ್ಗೆ ಮುನ್ನೆಚ್ಚರಿಕೆ ಕ್ರಮ ವಹಿಸುವ ಕುರಿತು ಸಾರ್ವಜನಿಕರಿಗೆ ತಿಳಿಸುವ ಮೂಲಕ ಸಾರ್ವಜನಿಕರ ಆಸ್ತಿಪಾಸ್ತಿಗಳ ನಷ್ಟವಾಗದಂತೆ ಮುನ್ನೆಚ್ಚರಿಕೆ ವಹಿಸಲು ಹಾಗೂ ಶಾಶ್ವತ ಪರಿಹಾರವನ್ನು ಒದಗಿಸಲು ಕ್ರಮ ಜರುಗಿಸಲಾಗಿರುತ್ತದೆ. |
| ಈ) | ಬೆಂಗಳೂರಿನ ಅನೇಕ ರಾಜಕಾಲುವೆಗಳ ತ್ಯಾಜ್ಯ ನಿರ್ವಹಣೆ ವಿಳಂಬವಾಗಿರುವುದು ಹಾಗೂ ಸದರಿ ರಾಜಕಾಲುವೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನದಲ್ಲಿದೆಯೇ: | ಗಮನಕ್ಕೆ ಬಂದಿರುತ್ತದೆ. |
| ಉ) | ಬಂದಿದ್ದಲ್ಲಿ ಸದರಿ ತ್ಯಾಜ್ಯ ನಿರ್ವಹಣೆಯನ್ನು ಹಾಗೂ ಒತ್ತುವರಿ ಯನ್ನು ತೆರವುಗೊಳಿಸಲು, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಸಾರ್ವಜನಿಕರು ರಾಜಕಾಲುವೆಗಳಲ್ಲಿ ತ್ಯಾಜ್ಯವನ್ನು ಹಾಕದಂತೆ ಮಾರ್ಷಲ್‌ಗಳನ್ನು ನೇಮಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ. ಮುಂದುವರೆದು, ರಾಜಕಾಲುವೆಗಳ ಒತ್ತುವರಿಗಳನ್ನು ತೆರವುಗೊಳಿಸುವ ಕ್ರಮ ಜಾರಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 788 ಎಂಎಸ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

[redacted]

**LALC-1052**

ಅನುಭಂದ–ಅ

| ಕ್ರಮ ಸ | ವಲಯ | ಒಟ್ಟು ನಷ್ಟ ರೂ ಕೋಟಿಗಳಲ್ಲಿ | ರಸ್ತೆಯ ಉದ್ದ (ಕೀ ಮಿ) | ಮನೆಗಳ ಸಂಖ್ಯೆ |
|---|---|---|---|---|
| 1 | ಪೂರ್ವ | 37.53 | 83.46 | 1549 |
| 2 | ಪಶ್ಚಿಮ | 0 | 0 | 0 |
| 3 | ದಕ್ಷಿಣ | 50 | 56.45 | 88 |
| 4 | ಬೊಮ್ಮನಹಳ್ಳಿ | 15 | 23 | 340 |
| 5 | ದಾಸರಹಳ್ಳಿ | 0.059 | 0 | 2 |
| 6 | ಮಹದೇವಪುರ | 280 | 81.03 | 160 |
| 7 | ರಾಜರಾಜೇಶ್ವರಿ ನಗರ | 10 | 39 | 0 |
| 8 | ಯಲಹಂಕ | 1.5 | 2.5 | 342 |
| **TOTAL** | | **394.089** | **285.44** | **2481** |

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ